


## ರೂಟಿ

ನಡೆಯುವಾಗ, ಓಡುವಾಗ, ಸೈಕಲ್ ಸವಾರಿ ಮಾಡುವಾಗ ಇದು ಮಾರ್ಗವನ್ನು ಅವಲೋಕಿಸಿ ಮ್ಯಾಪ್ ಮಾಡುತ್ತದೆ. ವೇಗ, ದೂರ ಹಾಗೂ ಎತ್ತರದ ಬಗ್ಗೆ ಅಂಕಿ-ಅಂಶಗಳನ್ನು ನೀಡುತ್ತದೆ. ಇದಕ್ಕೆ ಫೋಟೋಗಳನ್ನೂ ಅಪ್‌ಲೋಡ್ ಮಾಡಬಹುದು. ನಿಮ್ಮ ಚಟುವಟಿಕೆ ಮುಗಿಸಿದ ನಂತರ ನೀವು ಎಲ್ಲಿಗೆ ಹೋಗಿದ್ದೀರಿ, ಎಲ್ಲಿ ವಾಕ್ ಮಾಡಿದ್ದೀರಿ ಎಂಬುದನ್ನು ಮ್ಯಾಪ್‌ನಲ್ಲಿ ತೋರಿಸುತ್ತದೆ. ಎಲ್ಲಿಂದು ಶುರು ಮಾಡಿದ್ದೀರಿ, ಎಲ್ಲಿ ಮುಗಿಸಿದ್ದೀರಿ, ಅತ್ಯಂತ ಹೆಚ್ಚು ವೇಗ ಯಾವಾಗ ಇತ್ತು, ಅತ್ಯಂತ ಹೆಚ್ಚಿನ ಎತ್ತರ ಎಲ್ಲಿ ಇತ್ತು... ಇವೇ ಮೊದಲಾದವುಗಳ ವಿವರ ನೀಡುತ್ತದೆ.

## ಊವೂ ವಿಡಿಯೋ ಚ್ಯಾಟ್




ವಿಡಿಯೋ ಚ್ಯಾಟಿಂಗ್ ಆ್ಯಪ್ ಊವೂ ಹೊಸ ಅಂಶಗಳೊಂದಿಗೆ ಮತ್ತೆ ಪಾದಾರ್ಪಣೆ ಮಾಡಿದೆ. ಟೆಕ್ಸ್ಟ್ ಮೆಸೇಜ್, ಚಿತ್ರಗಳು ಹಾಗೂ ವಿಡಿಯೋ ಕ್ಲಿಪ್‌ಗಳನ್ನು ಉಚಿತವಾಗಿ ಕಳಿಸಬಹುದು. ಮೊಬೈಲ್‌ನಲ್ಲಿ 21 ಸೆಕೆಂಡ್‌ಗಳ ಕ್ಲಿಪ್‌ಗೆ ಸೀಮಿತವಾದರೂ, ಡೆಸ್ಕ್‌ಟಾಪ್‌ನಲ್ಲಿ ಇದಕ್ಕೆ ಮಿತಿ ಇಲ್ಲ. ವಿಡಿಯೋ ಚ್ಯಾಟ್ ಮಾಡುವಾಗ 12 ಮಂದಿ ಬಳಕೆದಾರರು ಒಮ್ಮೆಲೇ ಪಾಲ್ಗೊಳ್ಳಬಹುದು. ಊವೂ ಇಲ್ಲದ ಡಿವೈಸ್‌ಗೂ ಧ್ವನಿ ಕರೆಯನ್ನು ಸಪೋರ್ಟ್ ಮಾಡುತ್ತದೆ.

## ಬ್ಯಾಂಡ್‌ಕ್ಯಾಂಪ್ ಮ್ಯೂಸಿಕ್




ಐಫೋನ್‌ನ ಈ ಆ್ಯಪ್ ಲೇಸರ್ ಆಧಾರಿತವಾಗಿದ್ದು, ನೀವು ಈಗಾಗಲೇ ಖರೀದಿಸಿರುವ ಬ್ಯಾಂಡ್‌ಕ್ಯಾಂಪ್ ಮ್ಯೂಸಿಕ್‌ಗೆ ತಕ್ಷಣವೇ ಸಂಪರ್ಕ ಕಲ್ಪಿಸುತ್ತದೆ. ಇದು ಬಹಳಷ್ಟು ರೆಕಾರ್ಡಿಂಗ್ ಕಲಾವಿದರಿಗೆ ವೇದಿಕೆಯಾಗಿದ್ದು, ಹೋಂ ಪೇಜ್ ಹಾಗೂ ಭಂಡಾರವಾಗಿ ಕಾರ್ಯ ನಿರ್ವಹಿಸುತ್ತದೆ. ಬ್ಯಾಂಡ್‌ಕ್ಯಾಂಪ್ ಅಕೌಂಟ್ ತೆರೆದೊಡನೆ ಎರಡು ಬಾಕ್ಸ್ ಗಳು ಗೋಚರಿಸುತ್ತವೆ. ಒಂದರಲ್ಲಿ ನೀವು ಈಗಾಗಲೇ ಖರೀದಿಸಿರುವ ಮ್ಯೂಸಿಕ್ ಕಾಣಿಸುತ್ತದೆ. ಆಲ್ಬಂ ಕವರ್ ಮೇಲೆ ಕುಟ್ಟಿ. ಸಂಗೀತ ಸುಧೆ ಶುರುವಾಗುತ್ತದೆ.

## ಲಾಸ್ಟ್ ಪಾಸ್




ಇದು ಆ್ಯಂಡ್ರಾಯ್ಡ್‌ನ ಪಾಸ್‌ವರ್ಡ್ ಮ್ಯಾನೇಜರ್ ಆ್ಯಪ್. ಅಪರೂಪದ ಪಾಸ್‌ವರ್ಡ್ ಸೃಷ್ಟಿಸಲು ನೆರವಾಗುತ್ತದೆ. ಜೊತೆಗೆ ನಿಮ್ಮ ಎಲ್ಲಾ ಡಿವೈಸ್‌ಗಳ ಮಧ್ಯೆ ಸಿಂಕ್ ಮಾಡುತ್ತದೆ. ನಿಮ್ಮ ಎಲ್ಲಾ ಪಾಸ್‌ವರ್ಡ್‌ಗಳನ್ನು ರಕ್ಷಿಸುತ್ತದೆ. ನೋಟಿಸ್‌ಗಳನ್ನು ಕಾಪಿ ಮಾಡುತ್ತದೆ.

■ ಎಸ್. ತುಂಬೆ